ದ.ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕು ಸರ್ಕಾರಿ ಪದವಿ ಕಾಲೇಜು ಕುರಿತು

497 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿ 'ಸರ್ಕಾರಿ ಪದವಿ ಕಾಲೇಜು' ಇಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮಂಗಳೂರು ತಾಲ್ಲೂಕಿನ 'ಕಾವೂರ'ನಲ್ಲಿ ಸರ್ಕಾರಿ ಪದವಿ ಕಾಲೇಜಿನ ಪ್ರಾರಂಭಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ?

ಇ) 1994-95ರ ಶಿಕ್ಷಣ ವರ್ಷದಲ್ಲಿಯೇ ಮೇಲ್ಕಂಡ ಕಾಲೇಜನ್ನು ಪ್ರಾರಂಭಿಸಲು ಸರ್ಕಾರದ ಆದ್ಯತೆ ನೀಡುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) ಇಲ್ಲ

ಕುಪ್ಪದ ಗುಡ್ಡಕ್ಕೆ ಸಸಿಗಳನ್ನು ನೆಡುವ ಬಗ್ಗೆ

494 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ್ ಮತ್ತು ಮುಂಡರಗಿ ತಾಲ್ಲೂಕಿನ ಕುಪ್ಪದ ಗುಡ್ಡಕ್ಕೆ ಸಸಿಗಳನ್ನು (ಪ್ಲಾಂಟೇಷನ್) ಹೆಚ್ಚಿಗೆ ಬೆಳೆಸುವ ವಿಷಯದ ಬಗ್ಗೆ ಸರ್ಕಾರದವರು ಯೋಚಿಸಿರುವರೇ?

ಆ) ಹಾಗಿದ್ದಲ್ಲಿ ಯಾವ ತಾಲ್ಲೂಕಿನಲ್ಲಿ ಎಷ್ಟು ಎಂಬುದರ ಬಗ್ಗೆ ವಿವರ ನೀಡುವುದು?

ಇ) ಈ ವಿಷಯದಲ್ಲಿ ಈಗಾಗಲೇ ಒಂದು ಯೋಜನೆ ತಯಾರಾಗಿದ್ದು ನಿಜವೇ?

ಈ) ಹಾಗಿದ್ದಲ್ಲಿ, ಈ ಯೋಜನೆಯು ಯಾವ ಹಂತದಲ್ಲಿದೆ?

ಶ್ರೀ ಹೆಚ್. ವಿಶ್ವನಾಥ್ (ಅರಣ್ಯ ಸಚಿವರು) :

ಅ) ಹೌದು

ಆ) ಕುಪ್ಪದಗುಡ್ಡ ಪ್ರದೇಶದಲ್ಲಿ ಈ ಕೆಳಕಂಡ ತಾಲ್ಲೂಕುಗಳಲ್ಲಿ ಸಸಿಗಳನ್ನು ಬೆಳೆಸಲು ಯೋಜಿಸಿರುವ ನೆಡು-ತೋಪುಗಳ ಪ್ರಮಾಣ ಈ ಕೆಳಕಂಡಂತಿದೆ.

ವರ್ಷ	ಮುಂಡರಗಿ	ಶಿರಹಟ್ಟಿ	ಗದಗ್
1992-93	75 ಹೆ.	50 ಹೆ.	25 ಹೆ.
1993-94	75 ಹೆ.	50 ಹೆ.	25 ಹೆ.
1994-95	75 ಹೆ.	50 ಹೆ.	25 ಹೆ.
1995-96	75 ಹೆ.	50 ಹೆ.	25 ಹೆ.

ಒಟ್ಟು 600 ಹೆಕ್ಟೇರುಗಳು

ಇ) ಹೌದು

ಈ) ಉಪ ಅರಣ್ಯ ಸಂರಕ್ಷಣಾಧಿಕಾರಿ, ಗದಗ್‌ರವರು 600 ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಪ್ರಸ್ತಾವನೆ ಕಳಿಸಿದ್ದು, ಈ ವಿಷಯಕ್ಕೆ ಆದ್ಯಗಮನ ನೀಡಿ ಕುಪ್ಪದ ಗುಡ್ಡ ಪ್ರದೇಶದಲ್ಲಿ ಬರುವ ತಾಲ್ಲೂಕುಗಳಲ್ಲಿ ಕೆಳಕಂಡ ಪ್ರಮಾಣದ ನೆಡುತೋಪು ಬೆಳೆಸಲಾಗಿದೆ. ಅನುದಾನ ಲಭ್ಯವಾದ ಹಾಗೆ ಕುಪ್ಪದಗುಡ್ಡ ಪ್ರದೇಶದಲ್ಲಿ ನೆಡುತೋಪು ಕಾರ್ಯಕ್ರಮ ಹಂತಹಂತವಾಗಿ ಕೈಗೊಳ್ಳಲಾಗುವುದು.